ಒ ಎಸ್ 141/2018 ಡಿ.ಡಬ್ಲ್ಯೂ:2

ಇಂದು ದಿ: 02.04.2026 ರಂದು ಸಾಕ್ಷಿಯನ್ನು ಕರೆಯಿಸಲಾಯಿತು. ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು: ವಾದಿ ಪರ ವಕೀಲರಿಂದ:

ವಾದಿಯು ನನ್ನ ಅಕ್ಕ. ಆಸ್ತಿ ಬೇಕು ಎಂದು ದಾವೆ ಸಲ್ಲಿಸಿರುತ್ತಾರೆ. ಈ ಪ್ರಕರಣದಲ್ಲಿ ನಾನು ಮತ್ತು 2ನೇ ಪ್ರತಿವಾದಿ ಒಬ್ಬರೇ ವಕೀಲರನ್ನು ನೇಮಿಸಿಕೊಂಡಿದ್ದೇವೆ ಎಂದರೆ ಸರಿ. ಅದೇ ರೀತಿ ನಾನು ಮತ್ತು ನನ್ನ ತಂದೆ ಒಂದೇ ರೀತಿ ತಕರಾರು ಸಲ್ಲಿಸಿದ್ದೇವೆ ಎಂದರೆ ಸರಿ. ಆ ತಕರಾರಿನ ಪ್ರಕಾರ ನನ್ನ ತಂದೆ ಸಾಕ್ಷ್ಯ ಕೊಟ್ಟಿರುವುದು ನನಗೆ ಗೊತ್ತು. ನನ್ನ ತಂದೆ ಈಗಾಗಲೇ ಸಾಕ್ಷಿ ಕೊಟ್ಟಿದ್ದರೂ ಸಹ ನನ್ನ ತಂದೆಗೂ ಸಹ ಭಾಗ ಕೊಡಬೇಕು ಎಂದು ನಾನು ಸಾಕ್ಷ್ಯ ನುಡಿಯುತ್ತಿದ್ದೇನೆ. ನನ್ನ ತಂದೆಗೆ ಯಾವುದೇ ರೀತಿಯ ಹಕ್ಕು ಬರುವುದಿಲ್ಲ ಎಂದರೆ ಸರಿಯಲ್ಲ. ನನ್ನ ತಾಯಿ ಮೃತರಾದ ನಂತರ ನನ್ನ ತಂದೆ 2ನೇ ಮದುವೆಯಾಗಿದ್ದಾರೆ ಎಂದರೆ ಸರಿ. ನನ್ನ ತಂದೆಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಸಲ್ಲಿಸಿರುವ ಮುಖ್ಯ ವಿಚಾರಣೆ ಪ್ರಮಾಣ ಪತ್ರಕ್ಕೂ ಮತ್ತು ನಾನು ಹೇಳುತ್ತಿರುವ ಸಾಕ್ಷ್ಯಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ: ಇಲ್ಲ.

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ.

ಸಹಿ/-

ಹಿರಿಯ ಸಿವಿಲ್ ನ್ಯಾಯಾಧೀಶರು

ಮತ್ತು ಜೆ ಎಂ ಎಫ್ ಸಿ, ನಂಜನಗೂಡು.